ಓ.ಎಸ್ಃ 78/2018 ಪಿಡಬ್ಲೂ - 1

ದಿನಾಂಕಃ 09.09.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎಸ್.ಜಿ.ಎಸ್ ವಕೀಲರಿಂದಃ**

ನಾನು 2010 ರಿಂದ 2014-15 ರವರೆಗೆ ಚಾಮರಾಜೇಶ್ವರ ಚೀಟ್ ಫಂಡ್ಸ್ ನಲ್ಲಿ ಏಜೆಂಟ್ ಆಗಿದ್ದೆ. ನನ್ನ ಜೊತೆಗೆ ಪದ್ಮ ಮತ್ತು ಪ್ರಸಾದ್‌ರವರು ಏಜೆಂಟ್ ಆಗಿದ್ದು, ಬೇರೆ ಯಾರು ಏಜೆಂಟ್ ಆಗಿದ್ದರೂ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. 2010 ರಲ್ಲಿ ನಾನು 40 ಜನಕ್ಕೆ ಚೀಟಿಗೆ ಪರಿಚಯಿಸಿದೆನು. ನಾನು ಚೀಟಿಗೆ ಪರಿಚಯಿಸುವುದಕ್ಕಿಂತ ಮುಂಚೆ ಅವರ ಹೆಸರು, ತಂದೆ ಹೆಸರು, ವಿಳಾಸ ತಿಳಿದುಕೊಂಡಿರಬೇಕು ಎಂದರೆ ಸರಿ. ಅವರ ಆರ್ಥಿಕ ಸಾಮರ್ಥ್ಯದ ಬಗ್ಗೆ ತಿಳುವಳಿಕೆ ಇರಬೇಕು ಎಂದರೆ ಸರಿ. ಕೃಷ್ಣಮೂರ್ತಿರವರ ತಂದೆ ಹೆಸರು ಗೊತ್ತಿಲ್ಲ. 2010 ನೇ ಇಸವಿಯದು ಆಗಿದ್ದರಿಂದ ನನಗೆ ಅವರ ತಂದೆ ಹೆಸರು ನನಗೆ ನೆನಪಿಲ್ಲ. ಅದು ಐದು ಲಕ್ಷ ರೂಪಾಯಿ ಚೀಟಿ ಆಗಿದ್ದು, ಅದು 50 ತಿಂಗಳ ಅವಧಿಯ ಚೀಟಿಯಾಗಿತ್ತು. ಅದು ಕಾವೇರಿ-1 ಆಗಿತ್ತು. ನಾನು ಪ್ರಸಾದ್, ನಾಗಲಾಂಬಿಕೆ ಮತ್ತು ಇತರರು ಚೀಟಿದಾರರಾಗಿದ್ದು, ಅವರ ತಂದೆಯ ಹೆಸರು ನನಗೆ ನೆನಪಿಲ್ಲ. 2010 ರಲ್ಲಿ ನನ್ನ ಖಾತೆಗೆ ರೂ. 1,40,000/-ಕಮೀಷನ್ ಜಮಾ ಆಗಿರುತ್ತದೆ. ಆ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ಅಕೌಂಟ್ ಎಕ್ಸಾಟ್ರಕ್ಟ್ ನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. 2010 ನೇ ಇಸವಿಯಲ್ಲಿ ಒಂದು ಲಕ್ಷ, ಎರಡು ಲಕ್ಷ, ಐದು ಲಕ್ಷ ಮೊತ್ತದ ಚೀಟಿಗಳಿಗೆ ಎಷ್ಟು ಜನರನ್ನು ಮತ್ತು ಯಾವ ಗ್ರೂಪ್‌ಗಳಿಗೆ ಪರಿಚಯಿಸಿದ್ದೇನೆ ಎಂದು ನನಗೆ ನೆನಪಿಲ್ಲ. 2010 ರಲ್ಲಿ ನಾನು ಡಿಪ್ಲೋಮಾ ಅಂತಿಮ ವರ್ಷದಲ್ಲಿ ಓದುತ್ತಿದ್ದೇನು. ಆ ವರ್ಷ ನಾನು ತರಗತಿಗೆ ಹೋಗುತ್ತಿರಲಿಲ್ಲ ಎಂದರೆ, ನಿರಂತರವಾಗಿ ಹೋಗುತ್ತಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಕಾಲೇಜಿಗೆ ವಾರದಲ್ಲಿ 2-3 ದಿನ ಹೋಗುತ್ತಿರಲಿಲ್ಲ. ಕೃಷ್ಣಮೂರ್ತಿ, ನಾಗಲಾಂಬಿಕೆ, ಪ್ರಸಾದ್ ರವರನ್ನು ಚೀಟಿಗೆ ಪರಿಚಯಿಸಿದ್ದಕ್ಕೆ ನನಗೆ ರೂ. 15,000/- ಕಮೀಷನ್ ಲಭಿಸಿದೆ. 2011 ನೇ ಸಾಲಿನಲ್ಲಿ 40-50 ಜನ ಚೀಟಿಗೆ ಪರಿಚಯಿಸಿದ್ದೆ, ಅವರ ಹೆಸರು, ತಂದೆ ಹೆಸರು, ವಿಳಾಸ ಗೊತ್ತಿಲ್ಲ. ನಾನು ಆ ವರ್ಷದಲ್ಲಿ ಪರಿಚಯಿಸಿದ ವ್ಯಕ್ತಿಗಳ ಪೈಕಿ ಇಬ್ಬರೂ ಶ್ರೀನಾಥ್, ನಾಗೇಂದ್ರ ರವರುಗಳ ಹೆಸರು ಮಾತ್ರ ನೆನಪು ಇರುತ್ತದೆ. ನಾನು ಕಳೆದ ಬಾರಿ ಪಾಟಿಸವಾಲಿನಲ್ಲಿ ಒಂದೂವರೆ ವರ್ಷದಲ್ಲಿ 15-20 ಜನ ಚೀಟಿದಾರರನ್ನು ಪರಿಚಯಿಸಿದ್ದೆ ಎಂದು ಹೇಳಿದ್ದೆ ಎಂದರೆ ಸರಿ. 2010 ರಿಂದ 2012 ನೇ ಸಾಲಿನಲ್ಲಿ ನನಗೆ ನಾಲ್ಕು ಲಕ್ಷ ರೂಪಾಯಿ ಆದಾಯ ಬಂದಿರುತ್ತದೆ. ನನಗೆ ಅಷ್ಟು ಆದಾಯ ಬಂದಿರುವ ಬಗ್ಗೆ ದಾಖಲೆ ಇದೆ. ಅಷ್ಟು ಮೊತ್ತ ನನ್ನ ಖಾತೆಗೆ ಜಮೆ ಆಗಿರುತ್ತದೆ. ನನಗೆ ತಿಂಗಳಿಗೆ ಅಂದಾಜು 5-10 ಸಾವಿರ ಖರ್ಚಾಗಬಹುದು. ನಾನು ಚಾಮರಾಜೇಶ್ವರ ಚೀಟ್ಸ್ ನಲ್ಲಿ ಏಜೆಂಟ್ ಆಗಿಲ್ಲ ಮತ್ತು ಆ ಚೀಟ್ಸ್ ನಲ್ಲಿ ಕಮೀಷನ್ ಆಗಿ ಯಾವುದೇ ಹಣ ಸಂದಾಯ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ಮನೆಗೆ ಹಾಲು ಹಾಕುತ್ತಿದ್ದರಿಂದ ಪರಿಚಯಸ್ಥರು. ಅವರು ನಾನು ಚಿಕ್ಕವನಾಗಿದ್ದಾಗಿನಿಂದಲೂ ಪರಿಚಯಸ್ಥರು. ನನ್ನ ತಂದೆ 1999 ರಲ್ಲಿ ತೀರಿಕೊಂಡರು. ಆಗ

ನನಗೆ 7-8 ವರ್ಷ ವಯಸ್ಸು. ಆಗ ಪ್ರತಿವಾದಿ ನಮ್ಮ ಹತ್ತಿರ ಹಾಲು ಹಾಕುತ್ತಿರಲಿಲ್ಲ. 2007-08 ನೇ ಸಾಲಿನಿಂದ ಪ್ರತಿವಾದಿ ನಮಗೆ ಹಾಲು ಹಾಕುತ್ತಿದ್ದರು. 2008 ನೇ ಸಾಲಿನಲ್ಲಿ ಅವರು ಹಸುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2006 ರಲ್ಲಿಯೇ ಅವರು ಹಾಲು ಹಾಕುವುದನ್ನು ನಿಲ್ಲಿಸಿದ್ದಾರೆ ಎಂದರೆ ಸರಿಯಲ್ಲ. 2012 ರಲ್ಲಿ ನನಗೆ 21 ವರ್ಷ ವಯಸ್ಸಾಗಿತ್ತು. ನವೆಂಬರ್ 2012 ರಲ್ಲಿ ಪ್ರತಿವಾದಿ ಹಣ ಬೇಕು ಎಂದು ನನ್ನನ್ನು ನಮ್ಮ ಮನೆಯಲ್ಲಿ ಕೇಳಿದರು. ನಾನು ಯಾವುದೇ ಹಣಕಾಸಿನ ವ್ಯವಹಾರ ಮಾಡುವುದಿಲ್ಲ ಮತ್ತು ನಾನು ಯಾರಿಗೂ ಸಾಲ ಕೊಡುವುದಿಲ್ಲ. 2012 ನೇ ಸಾಲಿನಲ್ಲಿ ಪ್ರತಿವಾದಿಗೆ ಹಣ ಕೊಡುವ ಸಮಯದಲ್ಲಿ ನನ್ನ ಹತ್ತಿರ ಮೂರು ಲಕ್ಷ ಹಣವಿತ್ತು. 2012 ರಲ್ಲಿ ನನ್ನ ಖಾತೆಯಲ್ಲಿ ರೂ. 90,000/- ಇತ್ತು ಎಂದರೆ ಸರಿ, ಆದರೆ ರೂ. 3,00,000/- ಗಳನ್ನು ಡ್ರಾ ಮಾಡಿ ಮನೆಯಲ್ಲಿಟ್ಟಿದ್ದೇನು. ನಾನು ಯಾವ್ಯಾವ ತಿಂಗಳಲ್ಲಿ ಎಷ್ಟೆಷ್ಟು ಹಣ ಡ್ರಾ ಮಾಡಿದ್ದೇನೆ ಎಂದು ನೆನಪಿಲ್ಲ, ಅದನ್ನು ನೋಡಿ ಹೇಳಬೇಕಾಗುತ್ತದೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.